ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 16.02.2024.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ.ಎ.ಡಿ. ವಕೀಲರಿಂದಃ**

ನನಗೆ ಆಂಗ್ಲ ಭಾಷೆ ಓದಲು ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಆಂಗ್ಲ ಭಾಷಯಲ್ಲಿ ಬರೆದಿದ್ದು ಏನು ಇದೆ ಎಂದು ಗೊತ್ತಿಲ್ಲ. ನಾನು ಹಾಗೂ ಉಳಿದ ವಾದಿಯರು ಒಂದೇ ಮನೆಯಲ್ಲಿ ಇರುತ್ತೇವೆ, ಆದರೆ 1 ನೇ ಪ್ರತಿವಾದಿ ಬೇರೆಯಾಗಿ ವಾಸ ಮಾಡುತ್ತಿದ್ದಾನೆ. 1 ನೇ ಪ್ರತಿವಾದಿ ಎಲ್ಲಿ ಇರುತ್ತಾನೆ ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಈ ಕೇಸ್ ಮಾಡುವಾಗ ಎಲ್ಲಿ ಇರುತ್ತಾನೆ ಎಂದು ಚೌಕಾಶಿ ಮಾಡಿಲ್ಲ. ಈ ಕೇಸ್ ಮಾಡವ ಮುಂಚೆ 1 ನೇ ಪ್ರತಿವಾದಿ ಕುರಿತು ಚೌಕಾಶಿ ಮಾಡಿಲ್ಲ. ಈ ಕೇಸ್ ಆಗಿದಾಗಿನಿಂದ 1 ನೇ ಪ್ರತಿವಾದಿ ನನಗೆ ಬೇಟಿಯಾಗಿರುವುದಿಲ್ಲ. ಈ ದಾವೆಯ ಹಾಕುವುದಕ್ಕಿಂತ ಮುಂಚೆ 1 ನೇ ಪ್ರತಿವಾದಿ ನಮ್ಮ ಕುಟುಂಬದ ಪ್ರಮುಖ ಇದ್ದ ಎಂದರೆ ಸರಿ.

ನಮ್ಮ ಊರಿನ ಅಣ್ಣಾರಾವ್ ಪಾಟೀಲ್ ನನಗೆ ಗೊತ್ತು. ರೇವಯ್ಯ ಸಂಗಯ್ಯ ಹೀರೆಮಠ ಕೂಡಾ ನನಗೆ ಗೊತ್ತು. ಬಂಡಯ್ಯ ಬಾಬಯ್ಯ ಸ್ವಾಮಿ ಅಂದರೆ 2 ನೇ ಪ್ರತಿವಾದಿ ನನಗೆ ಗೊತ್ತಿಲ್ಲ. ಈ ದಾವೆ ಮಾಡುವ ಪೂರ್ದದಲ್ಲಿ 2 ನೇ ಪ್ರತಿವಾದಿಯನ್ನು ನಾವು ಬೇಟಿಯಾಗಿಲ್ಲ. ಈ ದಾವೆ ಮಾಡುವ ಪೂರ್ವದಲ್ಲಿ 1 ಮತ್ತು 2 ನೇ ಪ್ರತಿವಾದಿಯರನ್ನು ಕುರಿತು ದಾವೆ ಬಗ್ಗೆ ಚರ್ಚೆ ಮಾಡಿಲ್ಲ. 1 ನೇ ಪ್ರತಿವಾದಿ ಮದ್ಯ ವೇಸನಿ ಇದ್ದ ಹಾಗೂ ದಾವಾ ಸ್ವತ್ತುಗಳ ಮೇಲೆ ಸರಿಯಾಗಿ ನಿಗಾ ವಹಿಸುತ್ತಿದ್ದಿಲ್ಲ ಎಂದರೆ ಸರಿ. ಅದರಿಂದ ಹೊಲದ ಉತ್ಪನ್ನ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಈ ದಾವೆಯಲ್ಲಿ ಏನು ಪ್ರತಿವಾದ ಪತ್ರ ಸಲ್ಲಿಸಿರುತ್ತಾನೆ ಎಂದು ನಾನು ನಮ್ಮ ವಕೀಲರ ಮುಖಾಂತರ ಚೌಕಾಶಿ

ಮಾಡಿಲ್ಲ.

ಕಲಬುರಗಿಯ ವಿಗ್ನೇಶ ಹೀರೆಮಠ ಎಂಬುವವರು ಯಾರು ಎಂದು ನಾನು ಚೌಕಾಶಿ ಮಾಡಿಲ್ಲ. ಸುಮಾರು 7 ವರ್ಷಗಳ ಹಿಂದೆ ನಾನು ಮತ್ತು 1ನೇ ಪ್ರತಿವಾದಿ ಒಂದೇ ಮನೆಯಲ್ಲಿ ಜೊತೆಗೆ ಇರುತ್ತಿದ್ದೇವು ಎಂದರೆ ಸರಿ. 2017ರಲ್ಲಿ ನಾನು ಮತ್ತು ನನ್ನ ಗಂಡ ನಮ್ಮ ಊರಲ್ಲಿ ದಾವಾ ಜಮೀನನ್ನು ಮಾರಾಟ ಮಾಡುವುದು ಇದೆ ಎಂದು ಪ್ರಚಾರ ಹೊರಡಿಸಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ಆಗ ನಾವು ಅಣ್ಣಾರಾವ್ ಪಾಟೀಲ್ ರವರಿಗೆ ನಮ್ಮ ಜಮೀನನ್ನು ಮಾರಾಟ ಮಾಡುವುದು ಇದೆ ಎಂದು ಹೇಳಿರುತ್ತೇವೆ ಎಂದರೆ ಸರಿಯಲ್ಲ. ಅದೇ ರೀತಿ ಸದರಿ ಅಣ್ಣಾರಾವ್ ಪಾಟೀಲ್ ರವರಿಗೆ ನಮ್ಮ ಜಮೀನಿಗೆ ಹೆಚ್ಚಿಗೆ ಹಣ ಬರುವಂತೆ ನೋಡಿಕೊಳ್ಳಿ ಎಂದು ವಿನಂತಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

2017ರಲ್ಲಿ ನಮ್ಮ ಕುಟುಂಬದಲ್ಲಿ ನನ್ನ ಗಂಡನನ್ನು ಹೊರತುಪಡಿಸಿ ಬೇರೆ ಯಾರು ಆಧಾಯ ತರುವ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. 2016ರಲ್ಲಿ ನಮ್ಮ ಕುಟುಂಬದ ವೆಚ್ಚ ಭರಿಸಲು 1ನೇ ಪ್ರತಿವಾದಿ ಹಾಗೂ ದಾವಾ ಆಸ್ತಿ ಹೊರತುಪಡಿಸಿ ಯಾವುದೇ ಆಧಾಯ ಮೂಲ ಇರಲಿಲ್ಲ ಎಂದರೆ ಸರಿಯಲ್ಲ. 2ನೇ ಪ್ರತಿವಾದಿ ಒಂದು ಟೆಂಪೋ ಹೊಂದಿದ್ದು, 2017ರಕ್ಕಿಂತ ಮುಂಚೆ ಆತ ನಮ್ಮ ಊರಲ್ಲಿ ಸಾಮಾನುಗಳನ್ನು ಕಲಬುರಗಿಗೆ ಒಯ್ಯುವುದು ಅಲ್ಲಿಂದ ತೆಗೆದುಕೊಂಡು ಬರುವುದು ಮಾಡುತ್ತಿದ್ದ ಕಾರಣ ಆತನಿಗೆ ನಮ್ಮ ಊರಿನ ಪರಿಚಯ ಇದೆ ಎಂದರೆ ಇರಬಹುದು ಆದರೆ ನನಗೆ ಗೊತ್ತಿಲ್ಲ.

2017ರ ಬೇಸಿಗೆ ಕಾಲದಲ್ಲಿ 2ನೇ ಪ್ರತಿವಾದಿಗೆ ಅಣ್ಣಾರಾವ್ ಮುಖಾಂತರ ನಮ್ಮ ಜಮೀನು ಮಾರಾಟ ಮಾಡುವುದು ಎಂದು ಗೊತ್ತಾಗಿದ್ದರಿಂದ, ನಾನು ಮತ್ತು ನನ್ನ ಗಂಡ

ಇಬ್ಬರು ಕೂಡಿ ಅಣ್ಣಾರಾವ್ ಸಮಕ್ಷಮ ನಮ್ಮ ಜಮೀನನ್ನು ತೋರಿಸಿರುತ್ತೇವೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಮ್ಮ ಜಮೀನು ತುಂಬಾ ಕಳಪೆ ಮತ್ತು ಹದಗೆಟ್ಟಿತ್ತು ಎಂದರೆ ಸರಿಯಲ್ಲ. ನಮ್ಮ ಜಮೀನಿನ ಪೈಕಿ 2 ಎಕರೆ ಗುಡ್ಡ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು 3 ಎಕರೆ ಜಮೀನು ಸರಿಯಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ 3 ಎಕರೆ ಜಮೀನು ಕೂಡಾ 2017 ರಲ್ಲಿ ಸಾಗು ಮಾಡದೇ ಇರುವ ಕಾರಣ ಬಿಳು ಭೂಮಿಯಾಗಿತ್ತು ಎಂದರೆ ಸರಿಯಲ್ಲ.

2017 ರಲ್ಲಿ ನಮ್ಮ ಜಮೀನಿನಲ್ಲಿ ಗುಡ್ಡ ಮುಖಾಂತರ ಕಾಲುವೆ ನೀರು ನಮ್ಮ ಜಮೀನಿಗೆ ಸೋರಿ ಬರುತ್ತಿತ್ತು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಜಮೀನುನೋಡಿ ಬಂದ ನಂತರ ಅಣ್ಣಾರಾವ್ ರವರಿಗೆ ಮಾತುಕತೆ ಏರ್ಪಾಡು ಮಾಡಿ ಎಂದು ಹೇಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಭೂಮಿ ಪರಿಶೀಲನೆ ಮಾಡುವ ಕಾಲಕ್ಕೆ ನನ್ನ ಗಂಡ ಕಲಬುರಗಿಯ ವಾಗೇಶ್ ಹೀರೆಮಠ ರವರ ರೂ.2,40,000/- ಸಾಲ ತಿರಿಸುವ ಸಲುವಾಗಿ ಜಮೀನನ್ನು ಮಾರಾಟ ಮಾಡುತ್ತಿದ್ದೇನೆ ಎಂದು ನನ್ನ ಹಾಗೂ ಅಣ್ಣಾರಾವ್ ಸಮಕ್ಷಮ ಹೇಳಿರುತ್ತಾರೆ ಎಂದರೆ ಸರಿಯಲ್ಲ. ತದನಂತರ 2 ನೇ ಪ್ರತಿವಾದಿ ಸದರಿ ವಾಗೇಶ್ ಕುರಿತು ಸಾಲದ ಬಗ್ಗೆ ಖಾತ್ರಿ ಪಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ದಿಃ 25.08.2017 ರಂದು ಅಣ್ಣಾರಾವ್ ಮನೆಯಲ್ಲಿ ದಾವಾ ಸ್ವತ್ತಿನ ಮಾತುಕತೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ನಾನು, ನನ್ನ ಗಂಡ ಹಾಗೂ ಅಣ್ಣಾರಾವ್ ಮತ್ತು ರೇವಯ್ಯ ರವರು ಕೂಡಾ ಇದ್ದರು ಎಂದರೆ ಸರಿಯಲ್ಲ. ಸದರಿ ಮಾತುಕತೆಯಲ್ಲಿ ದಾವಾ ಸ್ವತ್ತುನ್ನು ರೂ.16 ಲಕ್ಷ ರೂ.8,000/- ಸಾವಿರ ಗಳಿಗೆ ಮಾರಾಟ

ಮಾಡುವುದಾಗಿ ಒಪ್ಪಂದ ಆಯಿತು ಎಂದರೆ ಸರಿಯಲ್ಲ. ಸದರಿ ಮಾತುಕತೆ ಸಮಯದಲ್ಲಿ ನನ್ನ ಸಮಕ್ಷಮ ಮುಂಗಡ ಅಂತ ರೂ.8 ಲಕ್ಷ ರೂ.8,000/-ಗಳನ್ನು 2 ನೇ ಪ್ರತಿವಾದಿ ನನ್ನ ಗಂಡನಿಗೆ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಉಳಿದ ಹಣವನ್ನು 4 ಲಕ್ಷ, 2 ಲಕ್ಷ, 2 ಲಕ್ಷ ರಂತೆ ಕೊಡಬೇಕೆಂದು ಮಾತುಕತೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಅದೇ ರೀತಿ 2 ನೇ ಪ್ರತಿವಾದಿ ಮಾತುಕತೆಯ ಅರ್ಧ ಹಣ ಕೊಟ್ಟಿದ್ದರಿಂದ ಆತನಿಗೆ ದಾವಾ ಸ್ವತ್ತಿನ ಕಬ್ಜೆ ಕೂಡಾ ಕೊಡಬೇಕೆಂದು ಮಾತಾಯಿತು ಎಂದರೆ ನನಗೆ ಗೊತ್ತಿಲ್ಲ. ಅದೇ ದಿನ ನಾವು ಮುಂಗಡ ಹಣ ಪಡೆದುಕೊಂಡು ಒಂದು ಬಿಳಿ ಹಾಳೆಯ ಮೇಲೆ ಅಣ್ಣಾರಾವ್ ಹಸ್ತಾಕ್ಷರದಿಂದ ಬರೆದ ದಾಖಲೆಗೆ ನಾನು, ನನ್ನ ಗಂಡ ಹಾಗೂ ಸಾಕ್ಷಿದಾರರು ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಕೈಯಲ್ಲಿ ನನ್ನ ಸಮಕ್ಷಮ ರೂ.8 ಲಕ್ಷ ರೂ.8,000/- ಹಣ ಮುಟ್ಟಿದ ತಕ್ಷಣ ಬಿಳಿ ಹಾಳೆಯ ಬರೆದ ದಾಖಲೆಯನ್ನು 2 ನೇ ಪ್ರತಿವಾದಿಗೆ ಕೊಟ್ಟಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು 1 ನೇ ಪ್ರತಿವಾದಿ ರೂ.100/- ಕೊಟ್ಟರೆ ಸಹಿ ಮಾಡುತ್ತಾನೆ ಎಂದು ನುಡಿಯುತ್ತಾರೆ.

ಹಣ ಕೊಟ್ಟ ದಿನ 2 ನೇ ಪ್ರತಿವಾದಿಗೆ ದಾವಾ ಸ್ವತ್ತಿನ ಕಬ್ಜೆ ಕೊಟ್ಟಿರುತ್ತೇವೆ ಹಾಗೂ ಅದೇ ದಿನ ಅವರು ಟ್ರ್ಯಾಕ್ಟರ್ ಮೂಲಕ ಗಳೆ ಚಾಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಉಳಿದ ಹಣ ಪೈಕಿ ದಿಃ 18.01.2018 ರಂದು ರೂ.4 ಲಕ್ಷ ಹಣ ಹಾಗೂ ದಿಃ 18.03.2019 ರಂದು ರೂ.2 ಲಕ್ಷ ಹಣವನ್ನು 2 ನೇ ಪ್ರತಿವಾದಿ ನಮಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು, 1 ನೇ ಪ್ರತಿವಾದಿ ಹಾಗೂ ಸಾಕ್ಷಿದಾರರು ಸೇರಿ ಹಣ ಮುಟ್ಟಿದ ಬಗ್ಗೆ ಪ್ರತ್ಯಕ ರಶೀದಿ ಕೂಡಾ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ದಿಃ 22.09.2020 ರಂದು

ಉಳಿದ ಹಣದ ಪೈಕಿ ರೂ.2 ಲಕ್ಷ ಹಣವನ್ನು ಕೊಡುವುದು ಬಾಕಿ ಇತ್ತು ಹಾಗೂ ಆ ದಿನ ಸದರಿ ರೂ.2 ಲಕ್ಷ ಹಣವನ್ನು 1 ನೇ ಪ್ರತಿವಾದಿ ಪಡೆದುಕೊಂಡು 2 ನೇ ಪ್ರತಿವಾದಿಗೆ ದಾವಾ ಸ್ವತ್ತುನ್ನು ನೋಂದಣಿ ಕ್ರಯ ಪತ್ರದ ಮುಖಾಂತರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ನಿಪಿ-1 ಆಗುವ ಕಾಲಕ್ಕೆ ನಾವು ಜೊತೆಯಲ್ಲಿ ಇರುತ್ತಿದ್ದೇವು ಎಂದರೆ ಸರಿ. ನಾನು ಕಲಬುರಗಿಗೆ ಬಂದು ಸುಮಾರು 5 ವರ್ಷ ಮೇಲಾಗಿರುತ್ತದೆ. ನಾನು ಕಲಬುರಗಿಯಲ್ಲಿ ನನ್ನ ಮಕ್ಕಳ ಜೊತೆಯಲ್ಲಿ ಇರುತ್ತೇನೆ. ನಿಪಿ-1 ರ ಆದ ನಂತರ ಮೊದಲು ಬರೆದುಕೊಟ್ಟ ಎಲ್ಲ ಕಾಗದ ಪತ್ರಗಳನ್ನು 2 ನೇ ಪ್ರತಿವಾದಿಯಿಂದ ನನ್ನ ಗಂಡ ಪಡೆದುಕೊಂಡಿರುತ್ತಾನೆ ಎಂದರೆ ಸರಿಯಲ್ಲ. 2017 ರಿಂದ 2 ನೇ ಪ್ರತಿವಾದಿಯೇ ದಾವಾ ಸ್ವತ್ತಿನ ಕಬ್ಜೆಯಲ್ಲಿ ಇದ್ದು, ಆತನೇ ಸಾಗುವಳಿ ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ತಾನು 2017 ರಿಂದ ದಾವಾ ಜಮೀನನ್ನು ಸುಮಾರು ರೂ.5 ಲಕ್ಷ ಖರ್ಚು ಮಾಡಿ ಅಭಿವೃದ್ಧಿ ಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಈಗ ದಾವಾ ಸ್ವತ್ತು ಒಳ್ಳೆಯ ರೀತಿಯಿಂದ ಕೂಡಿದ್ದರಿಂದ ಅದನ್ನು ಒಡೆದು ಹಾಕುವ ಸಲುವಾಗಿ ಈ ಸುಳ್ಳು ದಾವೆ ಮಾಡಿರುತ್ತೇವೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ಜೀವಂತ ಇರುವವರೆಗೂ ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಜೀವಂತ ಇರುವವರೆಗೂ ನನಗೆ ಪಾಲು ಬೇಡುವ ಹಕ್ಕು ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮದ್ಯಪಾನ ವೇಸನಿ ಇರುತ್ತಾನೆ ಹಾಗೂ ಆತನ ಜೊತೆ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಯಾರು ವ್ಯವಹಾರ ಮಾಡಬಾರದು ಎಂದು ಎಲ್ಲಿಯು ಪ್ರಕಟಣೆ ಹೊರಡಿಸಿರುವುದಿಲ್ಲ. ಈ ದಾವೆ ಹೊರತುಪಡಿಸಿ ನನ್ನ

ಗಂಡನಿಂದ ಮೋಸ ಮಾಡಿ ಕ್ರಯ ಪತ್ರ ಮಾಡಿಕೊಂಡಿರುತ್ತಾರೆ ಎಂದು ನಾನು ಯಾವುದೇ ಪೋಲೀಸ್ ಕೇಸ್ ಮಾಡಿರುವುದಿಲ್ಲ. ಈ ದಾವೆ ಹಾಕುವುಕ್ಕಿಂತ ಮುಂಚೆ ನನ್ನ ಗಂಡ ನಮ್ಮ ಕುಟುಂಬದ ಪ್ರಮುಖ ಇರುವುದಿಲ್ಲ ಹಾಗೂ ಆತನನ್ನು ತೆಗೆದು ಹಾಕಬೇಕೆಂದು ನಾನು ಯಾವುದೇ ದಾವೆ ಮಾಡಿಲ್ಲ.

ನನ್ನ ಗಂಡ ಎಲ್ಲಿ ಇರುತ್ತಾನೆ ಎಂದು ನಾನು ಯಾವುದೇ ಶೋಧನೆ ಮಾಡಿರುವುದಿಲ್ಲ. 2ನೇ ಪ್ರತಿವಾದಿ ಎಲ್ಲಿಯವರು ಹಾಗೂ ಏನು ಮಾಡುತ್ತಾರೆ ಎಂಬುವುದರ ಬಗ್ಗೆ ಪೂರ್ವಾಪರ ಚೌಕಾಶಿ ಮಾಡಿಲ್ಲ. 2ನೇ ಪ್ರತಿವಾದಿ ಈ ದಾವೆಯಲ್ಲಿ ಪ್ರತಿವಾದ ಪತ್ರ ಸಲ್ಲಿಸಿದ ನಂತರವು ಕೂಡಾ ಆತನ ಬಗ್ಗೆ ನಾವು ವಿಚಾರ ಮಾಡಿರುವುದಿಲ್ಲ. ಈ ಕೇಸಿನಲ್ಲಿ ನನ್ನ ಮಕ್ಕಳು ಸಾಕ್ಷಿ ನುಡಿದಿರುತ್ತಾರೆ. ನನ್ನ ಮಕ್ಕಳು ಹೇಗೆ ಸಾಕ್ಷಿ ನುಡಿದಿರುತ್ತಾರೆ ಎಂದು ನನಗೆ ಗೊತ್ತಿದೆ ಎಂದರೆ ಸರಿ. ನನ್ನ ಮಕ್ಕಳು ಒಪ್ಪಿಕೊಂಡಂತ ಸಾಕ್ಷಿಗಳನ್ನು ತಿದ್ದುವ ಸಲುವಾಗಿ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ: ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**